ಶ್ರೀ ಬಿ. ನಾರಾಯಣಸ್ವಾಮಿಯವರು.—ಇಂಥವರೇ ಎಂದು ಹೇಳುವುದಕ್ಕಾಗುವುದಿಲ್ಲವೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೆಸರನ್ನು ಹೇಳುವುದಕ್ಕೆ ಈಗ ಸಾಧ್ಯವಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು (ಚಿತ್ರದುರ್ಗ).—ಜಮೀನ್ದಾರರಾದ ಒಡೆಯರ ಜಮೀನನ್ನು ಅವರು ಉತ್ತಿರಲಿಲ್ಲವೆ?

**Sri H. SIDDAVEERAPPA.**—That does not arise.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ರೈತರು ಲ್ಯಾಂಡ್ ರೆವಿನ್ಯೂ ಕೋಡಿನ ಪ್ರಕಾರ ಅವರ ಜಮೀನಿನಲ್ಲಿ ಟೆನೆಂಟ್ಸ್ ಆಗಿ ಕೆಲಸಮಾಡುತ್ತಿದ್ದರೂ ಅಕ್ರಮವಾಗಿ ಆವರಿಗೆ ಸಹಾಯ ಕೊಡಲಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಆ ರೀತಿ ಅವರಿಗೆ ಸಹಾಯ ಕೊಟ್ಟು ರೈತರನ್ನು ಅಲ್ಲಿಂದ ಹೊರದೂಡಲಿಲ್ಲವೆ?

ಶ್ರೀ ಎಚ್. ಸಿದ್ದವೀರಪ್ಪನವರು.—ಇಲ್ಲ.

---

## Committee to go into complaints of Police atrocities during Kagodu Satyagraha.

*Q.*—203. **Sri S. GOPALA GOWDA** (Sagar-Hosanagar).—Will the Government be pleased to state :—

whether they have received complaints of police atrocities during Kagodu Satyagraha and whether they form a Committee to go into the truth or otherwise of such complaints ?

*A.*—**Sri H. SIDDAVEERAPPA** (Minister for Home Affairs and Agriculture).—There were some stray complaints received by post which on verification by the Department were found not true. None appeared in person and gave complaints.

As the complaints received were found not true on verification and as there is no trouble at Kagodu at present it is not proposed to form any Committee.

ಶ್ರೀ ಎಸ್. ಗೋಪಾಲಗೌಡರು.—ಅಂಚೆಯ ಮೂಲಕ ಬಂದ ದೂರುಗಳನ್ನು ಈ ಸಭೆಯ ಮುಂದಿಡಲಾಗುತ್ತದೆಯೆ ?

**Sri H. SIDDAVEERAPPA.**—Government do not consider it necessary. Everything is quiet there.

ಶ್ರೀ ಎಸ್. ಗೋಪಾಲಗೌಡರು.—ಈಗ ಯಾವ ತೊಂದರೆಯೂ ಇಲ್ಲ, ಎಲ್ಲವೂ ಸರಿಯಾಗಿದೆಯೆಂದು ಹೇಳಿದೆ. ಎಂದರೆ, ಯಾರಿಗೆ ಅಲ್ಲಿ ತೊಂದರೆಯಾಗುತ್ತಿತ್ತೋ ಅವರಿಗೆ ಸರ್ಕಾರ ಪರಿಹಾರ ದೊರಕಿಸಿದೆಯೆ?

**Mr. SPEAKER.**—That does not arise.

ಶ್ರೀ ಎಸ್. ಗೋಪಾಲಗೌಡರು.—ಆ ದೂರುಗಳನ್ನು ಯಾರು ಪರಿಶೀಲನೆಮಾಡಿ ನಿಜವಿಲ್ಲವೆಂದು ತೀರ್ಮಾನ ಮಾಡಿದರು ?

ಶ್ರೀ ಎಚ್. ಸಿದ್ದವೀರಪ್ಪನವರು.—ಸರ್ಕಾರದವರು.

ಶ್ರೀ ಎಸ್. ಗೋಪಾಲಗೌಡರು.—ಯಾರ ಮುಖಾಂತರ ?

ಶ್ರೀ ಎಚ್. ಸಿದ್ದವೀರಪ್ಪನವರು.—ಅಧಿಕಾರಿಗಳ ಮೂಲಕ.

ಶ್ರೀ ಎಸ್. ಗೋಪಾಲಗೌಡರು.—ಕಾಗೋಡಿನಲ್ಲಿ ಈಗ ಪರಿಸ್ಥಿತಿ ಪೂರ್ಣವಾಗಿ ಸರಿಯಾಗಿದೆಯೆಂದು ಯಾರಾದರೂ ವರದಿ ಮಾಡಿದ್ದಾರೆಯೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಹೌದು.

ಶ್ರೀ ಎಸ್. ಗೋಪಾಲಗೌಡರು.—ಯಾರಿಂದ ವರದಿ ಬಂದಿದೆ ?

ಶ್ರೀ ಎಚ್. ಸಿದ್ದವೀರಪ್ಪನವರು.—ಜಿಲ್ಲಾಧಿಕಾರಿಗಳಿಂದ.

---

## Indian Motor Vehicles Act of 1939.

*Q.*—249. **Sri Mulka GOVINDA REDDY** (Chitaldrug).—Will the Government be pleased to state :—

(a) when the Indian Motor Vehicles Act of 1939 came into force in the State ;

(b) whether it will be given retrospective effect from April 1951 ?

*A.*—**Sri H. SIDDAVEERAPPA** (Minister for Home Affairs and Agriculture).—

(a) From 1st April 1951.

(b) *Vide* reply to (a) above.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—1951 ನೆಯ ಇಸವಿ ಏಪ್ರಿಲ್ ಒಂದರಿಂದ ಯಾವ ಕಾರ್ಯಕ್ರಮ ನಡೆದಿದ್ದರೂ ಕೂಡ ಅದು ಕಾನೂನು ಪ್ರಕಾರ ನಡೆಯದೇಯಿದ್ದರೆ ಆರೀತಿ ನಡೆಸುವುದಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ಎಚ್. ಸಿದ್ದವೀರಪ್ಪನವರು.—That is a matter of opinion. ಎಲ್ಲಾ ಕಾನೂನು ಪ್ರಕಾರ ನಡೆದಿವೆಯೋ ವಿನಾ ಕಾನೂನು ಬಿಟ್ಟು ನಡೆದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—1-4-51 ಎಂದರೆ ತಾವು ಅಧಿಕಾರಕ್ಕೆ ಬಂದಮೇಲೆ ಜಾರಿಗೆ ಕೊಟ್ಟಿದ್ದೀರಿ, ಅದಕ್ಕೆ ಮೊದಲು ಕೊಟ್ಟಿಲ್ಲವೆಂಬುದು ಗೊತ್ತಿದೆಯೆ ?

**Sri H. SIDDAVEERAPPA.**—The Act was in force from 1st April 1951.

**Sri Mulka GOVINDA REDDY.**—It was not in operation. The Hon'ble Minister knows it, is it not?

**Sri H. SIDDAVEERAPPA.**—Only particular parts of it were not in operation. But the Act was in force.

---